## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಎಸ್.ಸಿ. 13/2024

**ಪಿರ್ಯಾದಿದಾರರು** – ರಾಜ್ಯದ ಪರವಾಗಿ
ಪ್ರಾಜ್ಞ ಸರ್ಕಾರಿ ಅಭಿಯೋಜಕರು,
ಹಾವೇರಿ.

**– ವಿರುದ್ಧ –**

**ಆರೋಪಿತರು** – 1. ರೇವಣೇಶ ತಂದೆ ಬಸವಣೆಪ್ಪ ಹುರಳಿಕುಪ್ಪಿ
ಹಾಗೂ ಇಬ್ಬರು.

### :: ದೋಷಾರೋಪಣೆ ::

ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಕೆ.ಸಿ. ಸದಾನಂದಸ್ವಾಮಿ; ನಾನು ಈ ಕೆಳಕಂಡ ಆರೋಪಿತರಾದ -

1. ರೇವಣೇಶ ತಂದೆ ಬಸವಣ್ಣೆಪ್ಪ ಹುರಳಿಕುಪ್ಪಿ,
   ವಯಾ: 26 ವರ್ಷ, ಉ: ಗೌಡಿಂ ಕೆಲಸ,
2. ಸಂತೋಷ ತಂದೆ ದಿನೇಶ ಹುರಳಿಕುಪ್ಪಿ
   ವಯಾ: 22 ವರ್ಷ, ಉ: ಕೂಲಿ ಕೆಲಸ,
   ಇಬ್ಬರ ವಾಸ ಸ್ಥಳ: ಹಳೇಗೆಜ್ಜಿಹಳ್ಳಿ, ಹಾನಗಲ್ಲ ತಾ.
3. ಅರುಣ ತಂದೆ ರಾಮಣ್ಣ ದೊಡ್ಮನಿ,
   ವಯಾ: 22 ವರ್ಷ, ಉ: ಗೌಂಡಿ ಕೆಲಸ,
   ವಾಸ ಸ್ಥಳ: ಕಾಲ್ವೆಕಲ್ಲಾಪುರ, ಹಾನಗಲ್ಲ ತಾ.

ಆರೋಪಿತರ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ:22/03/2022 ರಂದು ರಾತ್ರಿ 10-00 ಘಂಟೆ ಸುಮಾರಿಗೆ ಹಾನಗಲ್ಲ ಪೊಲೀಸ್ ಠಾಣಾ ವ್ಯಾಪ್ತಿಯ ಹಳೇಗೆಜ್ಜಿಹಳ್ಳಿ ಗ್ರಾಮದಲ್ಲಿ 1 ರಿಂದ 3 ನೇ ಆರೋಪಿತರು ಸಮಾನ ಉದ್ದೇಶ ತೀರಿಸಿಕೊಳ್ಳುವ ಸಲುವಾಗಿ, ಮೋಟಾರ ಸೈಕಲ್ ನಂ:ಕೆಎ-27/ಇಜೆ-8339 ನೇದ್ದರಲ್ಲಿ ಚಾಸಾ-1 ನೇದ್ದವರ ಮನೆಯ ಮುಂದೆ ಬಂದು ಚಾಸಾ-1 ರವರಿಗೆ "ನಮ್ಮ ಓಣಿಗೆ ನೀರು ಬಿಟ್ಟಿಲ್ಲ ಸೂಳೆ ಮಗನ"

ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಆ ಮೂಲಕ ಆರೋಪಿತರೆಲ್ಲರೂ ಭಾ.ದಂ.ಸಂ. ಕಲಂ.504 ಸಹವಾಚಕ ಕಲ.34 ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ಸಮಾನ ಉದ್ದೇಶ ತೀರಿಸಿಕೊಳ್ಳುವ ಸಲುವಾಗಿ, ಚಾಸಾ-1 ರವರಿಗೆ ಅಂಗಿಯ ಕೊರಳಪಟ್ಟಿಯನ್ನು ಹಿಡಿದು ಎಳೆದಾಡುತ್ತಾ ಕೈಯಿಂದ ಮೈಕೈಗೆ ಹೊಡಿ ಮಾಡಿ, ಅವರಿಗೆ ಮೈನೋವುಂಟು ಮಾಡಿದ್ದು, ಆ ಮೂಲಕ ಆರೋಪಿತರೆಲ್ಲರೂ ಭಾ.ದಂ.ಸಂ. ಕಲಂ.323 ಸಹವಾಚಕ ಕಲಂ.34 ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ಸಮಾನ ಉದ್ದೇಶ ತೀರಿಸಿಕೊಳ್ಳುವ ಸಲುವಾಗಿ, ಜಗಳ ಬಿಡಿಸಲು ಬಂದ ಚಾಸಾ-9 ಮತ್ತು 10 ನೇದ್ದರಿಂದ ಕೈಹಿಡಿದು ಎಳೆದಾಡಿ ದೂಡಾಡಿ ಸಾರ್ವಜನಿಕವಾಗಿ ಅವಮಾನಪಡಿಸಿದ್ದು, ಆ ಮೂಲಕ ಆರೋಪಿತರೆಲ್ಲರೂ ಭಾ.ದಂ.ಸಂ. ಕಲಂ.354 ಸಹವಾಚಕ ಕಲಂ.34 ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ಸಮಾನ ಉದ್ದೇಶ ತೀರಿಸಿಕೊಳ್ಳುವ ಸಲುವಾಗಿ, 1 ನೇ ಆರೋಪಿಯು ಮೋಟಾರ ಸೈಕಲ್ ಸೈಡ್ ಬ್ಯಾಗಿನಲ್ಲಿಟ್ಟಿದ್ದ ಚಾಕುವನ್ನು ತೆಗೆದುಕೊಂಡು ಬಂದು ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಲು ಬಂದಿದ್ದು, ಚಾಸಾ-8 ರವರಿಗೆ ಬಲಗೈ ಅಂಗೈಗೆ ಚಾಕುವಿನಿಂದ ಇರದು ರಕ್ತಗಾಯಪಡಿಸಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಆ ಮೂಲಕ ಆರೋಪಿತರೆಲ್ಲರೂ ಭಾ.ದಂ.ಸಂ. ಕಲಂ.307 ಸಹವಾಚಕ ಕಲಂ.34 ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ಸಮಾನ ಉದ್ದೇಶ ತೀರಿಸಿಕೊಳ್ಳುವ ಸಲುವಾಗಿ, 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ಚಾಕುವಿನಿಂದ ಚಾಸಾ-6 ರವರಿಗೆ ಎಡಗಡೆ ಪಕ್ಕಡಿಗೆ ಹಾಗೂ ಬೆನ್ನಿಗೆ ಹಾಕಿ ರಕ್ತಗಾಯಪಡಿಸಿ ಮತ್ತು ಚಾಸಾ-7 ರವರಿಗೆ ಬನ್ನಿನ ಮೂರು ಕಡೆಗೆ ಚುಚ್ಚಿ ರಕ್ತಗಾಯಪಡಿಸಿ ಹಲ್ಲೆ ಮಾಡಿ ಸ್ವತಃ ಸಾದಾಗಾಯಪಡಿಸಿದ್ದು, ಆ ಮೂಲಕ

ಆರೋಪಿತರೆಲ್ಲರೂ ಭಾ.ದಂ.ಸಂ. ಕಲಂ.324 ಸಹವಾಚಕ ಕಲಂ.34 ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

ಈ ಮೇಲೆ ಹೇಳಿದ ದೋಷಾರೋಪಣೆಗಳಿಗಾಗಿ ಈ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಯಲಿದೆ.

**ಹಾವೇರಿ**
**ದಿನಾಂಕಃ** 05/04/2024

**(ಕೆ.ಸಿ. ಸದಾನಂದಸ್ವಾಮಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಹಾವೇರಿ.**

## <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.</u>

## <u>ಪ್ರಕರಣ ಸಂಖ್ಯೆ ಎಸ್.ಸಿ. 13/2024</u>

ಫಿರ್ಯಾದಿ - ಸರಕಾರ – ಪ್ರತಿನಿಧಿಸುವವರು
ಸರಕಾರಿ ಅಭಿಯೋಜಕರು, ಹಾವೇರಿ.

**– ವಿರುದ್ಧ –**

ಆರೋಪಿ - 1. ರೇವಣೇಶ ತಂದೆ ಬಸವಣ್ಣೆಪ್ಪ ಹುರಳಿಕುಪ್ಪಿ,

## <u>ಆರೋಪಿಯ ಹೇಳಿಕೆ</u>

ಪ್ರಶ್ನೆ-1 - ನಿಮ್ಮ ಮೇಲೆ ಓದಿ ಹೇಳಲಾದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ - ತಿಳಿದಿದೆ.

ಪ್ರಶ್ನೆ-2 - ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಧಿವಿಚಾರಣೆ ಬಯಸುತ್ತೀರೋ?

ಉತ್ತರ - ದೋಷಾರೋಪಣೆ ಒಪ್ಪಿಕೊಳ್ಳುವುದಿಲ್ಲ. ವಿಚಾರಣೆಯಾಗಬೇಕು.

ಆರೋಪಿ ಸಹಿ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅವರು ಕೊಟ್ಟ ಹೇಳಿಕೆಯನ್ನು, ನಾನೇ ಖುದ್ದು ದಾಖಲಿಸಿಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

**ಸ್ಥಳಃ ಹಾವೇರಿ**

**ದಿನಾಂಕಃ** 05/04/2024 **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಹಾವೇರಿ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆ: ಎಸ್.ಸಿ. 13/2024**

ಫಿರ್ಯಾದಿ - ಸರಕಾರ – ಪ್ರತಿನಿಧಿಸುವವರು
ಸರಕಾರಿ ಅಭಿಯೋಜಕರು, ಹಾವೇರಿ.

**– ವಿರುದ್ಧ –**

ಆರೋಪಿ -2. ಸಂತೋಷ ತಂದೆ ದಿನೇಶ ಹುರಳಿಕುಪ್ಪಿ

**ಆರೋಪಿಯ ಹೇಳಿಕೆ**

ಪ್ರಶ್ನೆ-1 - ನಿಮ್ಮ ಮೇಲೆ ಓದಿ ಹೇಳಲಾದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ - ತಿಳಿದಿದೆ.

ಪ್ರಶ್ನೆ-2 - ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಧಿವಿಚಾರಣೆ ಬಯಸುತ್ತೀರೋ?

ಉತ್ತರ - ದೋಷಾರೋಪಣೆ ಒಪ್ಪಿಕೊಳ್ಳುವುದಿಲ್ಲ. ವಿಚಾರಣೆಯಾಗಬೇಕು.

ಆರೋಪಿ ಸಹಿ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅವರು ಕೊಟ್ಟ ಹೇಳಿಕೆಯನ್ನು, ನಾನೇ ಖುದ್ದು ದಾಖಲಿಸಿಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

**ಸ್ಥಳ: ಹಾವೇರಿ**

**ದಿನಾಂಕ:** 05/04/2024

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಹಾವೇರಿ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆ ಎಸ್.ಸಿ. 13/2024**

ಫಿರ್ಯಾದಿ - ಸರಕಾರ – ಪ್ರತಿನಿಧಿಸುವವರು
ಸರಕಾರಿ ಅಭಿಯೋಜಕರು, ಹಾವೇರಿ.

**– ವಿರುದ್ಧ –**

ಆರೋಪಿ -3. ಅರುಣ ತಂದೆ ರಾಮಣ್ಣ ದೊಡ್ಮನಿ,

**ಆರೋಪಿಯ ಹೇಳಿಕೆ**

ಪ್ರಶ್ನೆ-1 - ನಿಮ್ಮ ಮೇಲೆ ಓದಿ ಹೇಳಲಾದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ - ತಿಳಿದಿದೆ.

ಪ್ರಶ್ನೆ-2 - ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಧಿವಿಚಾರಣೆ ಬಯಸುತ್ತೀರೋ?

ಉತ್ತರ - ದೋಷಾರೋಪಣೆ ಒಪ್ಪಿಕೊಳ್ಳುವುದಿಲ್ಲ. ವಿಚಾರಣೆಯಾಗಬೇಕು.

ಆರೋಪಿ ಸಹಿ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅವರು ಕೊಟ್ಟ ಹೇಳಿಕೆಯನ್ನು, ನಾನೇ ಖುದ್ದು ದಾಖಲಿಸಿಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

**ಸ್ಥಳಃ ಹಾವೇರಿ**

**ದಿನಾಂಕಃ** 05/04/2024

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಹಾವೇರಿ.**